ಸಾಕ್ಷಿಯ ಹೆಸರುಃ ಪ್ರಭು ಎಂ.ಎಸ್.

ದಿನಾಂಕಃ **17-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ.ಸಿ.ಎಸ್. ವಕೀಲರಿಂದಃ**

ನಾನು ಮೂಲತಃ ಮೈಲಾರಪಟ್ಟಣ ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆಯವನಾಗಿದ್ದೇನೆ. ನನಗೆ ವಾದಿ ಕುಮಾರಸ್ವಾಮಿ ಪರಿಯವಿಲ್ಲ, ಆದರೆ ನರಸಿಂಹರಾಜು (PW2) ಪರಿಚಯ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ ನಾನೇ ಬಂದು ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನರಸಿಂಹರಾಜು ಹೇಳಿರುತ್ತಾರೆ. ಅವರೇ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನರಸಿಂಹರಾಜುರವರು ಹೇಳಿ ಬರೆಯಿಸಿರುತ್ತಾರೆ ಎಂದರೆ ಸಾಕ್ಷಿ ನಾನು ಏನು ಹೇಳಬೇಕೋ ಅದನ್ನು ಹೇಳಿ ಬರೆಯಿಸಿರುತ್ತೇನೆ ಎನ್ನುತ್ತಾರೆ.

2) ನಿಪಿ-01 ಕ್ರಯದ ಕರಾರುಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸದರಿ ನಿಪಿ-01 ನ್ನು ಮಾಡುವಾಗ ನಾನು ನೊಂದಣಿ ಕಚೇರಿಯಲ್ಲಿ ಹಾಜರಿರಲಿಲ್ಲ ಎಂದರೆ ಸರಿ. ಈ ಕ್ರಯದ ವ್ಯವಹಾರವನ್ನು ಮಾಡುವಾಗ, ಹುಳುವಿನ ಹತ್ತಿಗುಪ್ಪೆಗ್ರಾಮದಲ್ಲಿ ನಾನು, ವಾದಿ, 1 ನೇ ಪ್ರತಿವಾದಿ ಮತ್ತು ಅವರ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಹಾಜರಿದ್ದೆವು. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದರಿಂದ ಎಲ್ಲಾ ಪ್ರತಿವಾದಿಯರಿಗೆ ಅದರ ಮೇಲೆ ಹಕ್ಕು ಇದೆ ಎಂದರೆ ಸರಿ. ನಿಪಿ-01 ಕ್ಕೆ 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳು ಸಹಿ ಹಾಕಿಲ್ಲ ಎಂದರೆ ಸರಿ.

3) ನಾನು ಮೈಲಾರುಪಟ್ಟಣದಲ್ಲಿ ವ್ಯವಸಾಯ ಮಾಡುತ್ತೇನೆ. ದಾವಾಸ್ವತ್ತಿನ ಬೆಲೆ 2014ರಲ್ಲಿ ಎಕರೆಗೆ ರೂ.3 ಲಕ್ಷ ಇದ್ದು, ಅದರಂತೆ ಮಾತುಕತೆ ಮಾಡಿರುತ್ತೇವೆ. ಆ ಜಮೀನು ಖಾಲಿ ಜಮೀನಾಗಿರುತ್ತದೆ ಮತ್ತು ಡ್ರೈ ಲ್ಯಾಂಡ್ ಆಗಿದೆ. ಇಂದಿನ ಮಾರುಕಟ್ಟೆ ಬೆಲೆ ಎಕರೆಗೆ ರೂ.5 ರಿಂದ ರೂ.10 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸುಳ್ಳು. ಈ ವ್ಯವಹಾರದಲ್ಲಿ ನಾನು ಭಾಗವಹಿಸದೇ ಇದ್ದರೂ ಸಹ, ವಾದಿ ಕುಮಾರಸ್ವಾಮಿ ಮತ್ತು ನರಸಿಂಹರಾಜುರವರ ಮಾತುಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಈ ವ್ಯವಹಾರದಲ್ಲಿ ಭಾಗಿಯಾಗಿದ್ದರೆ, ನಾನು ಬಂದು ದಾಖಲೆಗೆ ಸಹಿ ಮಾಡುತ್ತಿದ್ದೆ ಎಂದರೆ ಸಾಕ್ಷಿ ನನಗೆ ಅನಿವಾರ್ಯ ಕಾರಣಗಳಿಂದ ಬರಲು ಆಗಿರುವುದಿಲ್ಲ ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿ ಸ್ಥಳಿಕನಾಗಿರದೇ ಇದ್ದರೂ ಸಹ, ಬೇರೆ ಊರಿನಿಂದ ಬಂದು ವಾದಿಯ ಪರವಾಗಿ, ನರಸಿಂಹರಾಜುರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಕೆ.ಪಿ .ಎಂ. ವಕೀಲರಿಂದಃ**

4) ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ್ಲ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕೊಡು ಕೊಳ್ಳುವ ವ್ಯವಹಾರದ ಬಗ್ಗೆ ಚೆನ್ನಾಗಿ ಗೊತ್ತು ಎಂದರೆ ಸರಿಯಲ್ಲ. ಒಂದು ಆಸ್ತಿಯನ್ನು ಕ್ರಯಕ್ಕೆ ಕೊಳ್ಳುವಾಗ ಅದರ ಹಕ್ಕುದಾರರೆಲ್ಲಾ ಸಹಿ ಮಾಡಬೇಕು ಎಂದರೆ ಸರಿ. ಈ ವ್ಯವಹಾರ ಮಾಡುವಾಗ, 1 ನೇ ಪ್ರತಿವಾದಿಗೆ 3 ರಿಂದ 7 ನೇ ಪ್ರತಿವಾದಿಯರು ವಾರಸುದಾರರು ಇದ್ದಾರೆ ಎಂದು ನನಗೆ ಗೊತ್ತಿತ್ತು ಮತ್ತು ಆ ವಿಷಯವನ್ನು ನಾನು ವಾದಿಗೆ ತಿಳಿಸಿದ್ದೆ. ನಾನು ಮತ್ತು ವಾದಿ ಸ್ಥಳಕ್ಕೆ ಹೋಗಿ ದಾವಾಸ್ವತ್ತು/ಜಮೀನನ್ನು ನೋಡಿಕೊಂಡು ಬಂದಿದ್ದೆವು. ಆ ಸಮಯದಲ್ಲಿ ಆ

ಜಮೀನಿನ ಬೆಲೆ ಎಕರೆಗೆ ರೂ.10 ರಿಂದ ರೂ.12 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ನಾನು, ವಾದಿ, 1 ಮತ್ತು 2 ನೇ ಪ್ರತಿವಾದಿಯರು ಸೇರಿ ಉಳಿದ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-01 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 8 ಮತ್ತು 9 ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.